†ಶ್ರೀ ಕೆ. ಪ್ರಭಾಕರ್.—ಅಲ್ಲಿ ಕಾನೂನು ಪ್ರಕಾರ ಹರಿಜನರಿಗೆ ಗಿರಿಜನರಿಗೆ ಸೀಟುಗಳನ್ನು ಕೊಡುವಾಗ ದಾಮಾಷಾ ಪ್ರಕಾರ ಇಷ್ಟು ಜನಸಂಖ್ಯೆ ಇರಬೇಕೆಂದು ಇರುತ್ತದೆ. ದಾಮಾಷಾ ಪ್ರಕಾರ ಅಲ್ಲಿ ಹರಿಜನ-ಗಿರಿಜನರ ಸಂಖ್ಯೆ ಇಷ್ಟು ಇಲ್ಲದ ಕಾರಣ ಅವರಿಗಾಗಿ ಸೀಟನ್ನು ಕಾಯ್ದಿರಿಸಲು ಅವಕಾಶ ಇಲ್ಲ. ಈ ಕಾರಣದಿಂದ ಅವರಿಗೆ ಸೀಟನ್ನು ಕೊಡುವುದಕ್ಕಾಗುವುದಿಲ್ಲ ಎಂಬುದಾಗಿ ಹೇಳಿದ್ದೇವೆ. ಅದು ಕ್ರಮವಾಗಿದೆ.

ಶ್ರೀ ಕೆ. ವೆಂಕಟರಾಮಯ್ಯ.—ಅಲ್ಲಿದ್ದಂತಹ ಜನರು ಏನಾದರೂ ಹೊರಟು ಹೋದರೆ ? ಅಲ್ಲಿದ್ದಂತಹ ರಿಸರ್ವ್ ಸೀಟನ್ನು ತೆಗೆಯುವುದಕ್ಕೆ ಕಾರಣವೇನು ? ಅಲ್ಲಿ ಹರಿಜನ-ಗಿರಿಜನರಿಗಾಗಿ ಇದ್ದಂತಹ ಸೀಟನ್ನು ತೆಗೆದುಹಾಕಿ ಅವರಿಗಾಗಿ ಇದ್ದಂತ ಪ್ರಾತಿನಿಧ್ಯವನ್ನು ನಿಮ್ಮ ಕಾಲದಲ್ಲೇ ತೆಗೆದರೆ ಜನ ಏನು ಅನ್ನುತ್ತಾರೆ ? ನಿಮಗೆ ಸರ್ಕಾರದ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆ. ಆ ತಪ್ಪು ಮಾಹಿತಿ ಕೊಟ್ಟಂತಹ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಪ್ರಭಾಕರ್.—ನಮ್ಮ ಕಾಲದಲ್ಲಿ ಸ್ವಇಚ್ಛೆಯಿಂದ ತೆಗೆದದ್ದಲ್ಲ. ಜನ ಏನೂ ಹೇಳುವುದಿಲ್ಲ. ಕಾನೂನು ಪ್ರಕಾರ ಸರಿ ಇದೆ. ಒಂದು ಗ್ರಾಮದಲ್ಲಿ ಹರಿಜನರು ಇರತಕ್ಕಂತಹ ಕ್ಷೇತ್ರ ಎನಿದೆ ಆ ಜನ ಸಂಖ್ಯೆಯನ್ನು ಪಕ್ಕದ ಊರಿಗೆ ಸೇರಿಸಿ ಸೀಟು ಇಲ್ಲದಹಾಗೆ ಮಾಡಿ ಪಕ್ಕದ ಊರಿಗೆ ಕೊಟ್ಟರತಕ್ಕಂತಹ ಸಂದರ್ಭಗಳು ಇವೆ. ಇಲ್ಲಿ ಆ ತತ್ವವನ್ನು ಅನುಸರಿಸಿ ಏನಾದರೂ ಮಾಡಿದ್ದಾರೆಯೇ ಎನ್ನುವುದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ವೆಂಕಟರಾಮಯ್ಯ.—ಪಕ್ಕದ ಊರಿಗೆ ಸೇರಿರಬಹುದೆಂಬುದನ್ನು ಪರಿಶೀಲನೆ ಮಾಡುತ್ತೇನೆಂದು ತಾವು ಹೇಳುತ್ತೀರಾ; ಅಂಕಿ ಅಂಶಗಳನ್ನು ಸರಿಯಾಗಿ ನಿಮಗೆ ಕೊಟ್ಟಿಲ್ಲ. ಅಲ್ಲಿರತಕ್ಕಂತಹ ವಿಲೇಜ್ ಎಕ್ಸ್‌ಟೆನ್‌ಷನ್ ಆಫೀಸರ್ ದುಡ್ಡು ತಿಂದು ಈ ರೀತಿ ಅನ್ಯಾಯವಾಗಿರತಕ್ಕಂತಹ ಅನೇಕ ಪಂಚಾಯಿತಿಗಳಿವೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಕೆ. ಪ್ರಭಾಕರ್.—ಖಂಡಿತವಾಗಿ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ವೆಂಕಟರಾಮಯ್ಯ.—ಕುರುಬರ ಹಳ್ಳಿಯಲ್ಲಿ ಮಹಿಳೆಯರಿಗಾಗಿ ಇದ್ದಂತಹ ಸೀಟನ್ನು ರದ್ದು ಮಾಡಿದ್ದಾರೆ. ಅಲ್ಲಿ ಮಹಿಳೆಯರೇ ಇಲ್ಲವೇ ?

ಶ್ರೀ ಕೆ. ಪ್ರಭಾಕರ್.—ಕಾನೂನಿನ ಆಧಾರದ ಮೇಲೆ ಮಾಡಿರುತ್ತಾರೆ. ಕುರುಬರ ಹಳ್ಳಿಯಲ್ಲಿ ೨೦೩ ಮಹಿಳಾ ಜನಸಂಖ್ಯೆ ಇದೆ. ಕಾನೂನು ಪ್ರಕಾರ ಮಾಡಿದ್ದಾರೆಂದು ನನ್ನ ಭಾವನೆ. ಇದನ್ನು ನಾನೇ ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷೆ ಮಾಡಿ ವೈಯಕ್ತಿಕವಾದ ಚೇಷ್ಟೆಯಿಂದ ಏನಾದರೂ ಮಾಡಿದ್ದರೆ ಕಠಿಣವಾದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ.

Representation from Kollegal Taluk about Drinking Water.

641 SRI M. SIDDAMADAIAH. (Kollegal)—Will the Minister for Rural Development and Panchayati Raj be pleased to state.—

(*a*) whether any representations have been received by the Government regarding scarcity of drinking water in Kollegal Taluk ;

(*b*) if so, the number of villages where arrangements have been made to provide drinking water by chalking out programme in order to solve the problems of drinking water ;

(*c*) the number of villages where borewells and hand pumps have been installed by the Government which have gone out of order, the number of pumps that are functioning and the reason for the delay in respairing the remaining pumps ?

SRI K. PRABHAKAR, (Minister for Rural Development and Panchayat Raj).—

(a) No.

(b) This question does not arise in view of the reply above. However, the programme for digging borewells in 37 villages-Dakal villages during current year as per the minimum needs programme in this taluk has been chalked out so far and 39 borewells have been dug in all the said villages and out of them, 36 borewells are successful and drinking water has been provided to the villages by fixing hand pumps to all these wells.

(c) The total number of villages and Dakale villages where borewells have been dug. ... 213

(2) The total number of borewells ... 323

(3) The number of successful borewells ... 251

(4) The number of borewells fitted with hand pumps. ... 251

(5) The number of hand pumps fixed to the successful borewells which have gone out of order ... 207

(6) The number of hand pumps working properly. ... 251

The delay is not noticed, since the hand pumps are repaired immediately after they go out of order as detailed above.

ಶ್ರೀ ಎಂ. ಸಿದ್ದಮಾದಯ್ಯ.—ಕೊಳ್ಳೇಗಾಲ ತಾಲ್ಲೂಕಿನಲ್ಲಿ ಒಟ್ಟು ಕೊಳವೆ ಬಾವಿಗಳ ಸಂಖ್ಯೆ ೩೨೩ ಎಂಬುದಾಗಿ ಹೇಳಿದ್ದೀರಿ. ಆದರಲ್ಲಿ ಯಶಸ್ವಿಯಾಗಿರತಕ್ಕಂತಹ ಕೊಳವೆ ಬಾವಿಗಳ ಸಂಖ್ಯೆ ೨೫೧ ಎಂಬುದಾಗಿ ಹೇಳಿದ್ದೀರಿ. ಬಾಕಿ ಕೊಳವೆ ಬಾವಿಗಳನ್ನು ಏಕೆ ಇದುವರೆಗೂ ಸರಿಪಡಿಸಿಲ್ಲ ? ಅಲ್ಲಿನ ಜನರಿಗೆ ನೀರನ್ನು ಒದಗಿಸಿಲ್ಲ ಎಂಬುದನ್ನು ತಿಳಿಸುತ್ತೀರಾ ?

† ಶ್ರೀ ಕೆ. ಪ್ರಭಾಕರ್.—ಕೆಟ್ಟು ಹೋದಹಾಗೆಲ್ಲಾ ಸರಿಪಡಿಸುತ್ತೇವೆ. ಇನ್ನೂ ಕೆಲವು ಸರಿಪಡಿಸಬೇಕಾಗಿರುವವು ಇವೆ ಎಂಬುದಾಗಿ ಹೇಳಿದ್ದೇವೆ. ಇದನ್ನು ಕ್ರಮಬದ್ಧವಾಗಿ ಒಂದು ಕಡೆಯಿಂದ ಸರಿಪಡಿಸಿಕೊಂಡು ಹೋಗತಕ್ಕಂತಹ ರೀತಿಯಲ್ಲಿ ಬೇಗ ಸರಿಪಡಿಸುತ್ತೇನೆ.

ಶ್ರೀ ಎಂ. ಸಿದ್ದಮಾದಯ್ಯ.—ಸರಿಪಡಿಸಿದ್ದೇವೆಂದು ತಾವು ಹೇಳುತ್ತೀರ, ಆದರೆ ಸ್ಥಳಕ್ಕೆ ಹೋಗಿ ಹೋಡಿದರೆ ನಿಜವಾಗಿಯೂ ಅಲ್ಲಿರತಕ್ಕಂತಹ ಕೊಳವೆ ಬಾವಿ ಕೆಲಸ ಮಾಡುತ್ತಿರುವುದಿಲ್ಲ. ಇಂತಹ ಅವ್ಯವಸ್ಥೆಗೆ ಕಾರಣರು ಯಾರು ?

ಶ್ರೀ ಕೆ. ಪ್ರಭಾಕರ್.—ಸರಿಪಡಿಸುತ್ತೇವೆಂದು ಹೇಳಿದ್ದೇವೆ. ಆದರೆ ತಾವು ತಿಳಿಸಿದ ಹಾಗೆ ಅಷ್ಟೇ ಸಂಖ್ಯೆಯಲ್ಲಿ ಕೆಟ್ಟು ಹೋಗಿಲ್ಲ. ಒಂದು ಸರಿ ಮಾಡಿಸಿಕೊಂಡು ಹೋಗಬೇಕಾದರೆ ಮತ್ತೊಂದು ಕಡೆ ಸರಿಯಾಗಿರುವುದಿಲ್ಲ ಎಂಬುದು ತಮ್ಮ ದೃಷ್ಟಿಯಲ್ಲಿರಬಹುದು. ಪೂರ್ತಿಯಾಗಿ ಸರಿ ಮಾಡಿಸುತ್ತೇವೆಂದು ನನ್ನ ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಜಿ. ರಾಜಗೌಡ.—ತಾವು ಎಷ್ಟು ಜನಸಂಖ್ಯೆಗೊಂದರಂತೆ ಒಂದು ಕೊಳವೆ ಬಾವಿಯನ್ನು ಹಾಕತಕ್ಕಂತಹ ನೀತಿಯನ್ನು ಇಟ್ಟುಕೊಂಡಿದ್ದೀರಿ, ಸಿ೭ ಗ್ರಾಮಗಳಲ್ಲಿ ಕೊಳವೆ ಬಾವಿಗಳನ್ನು ಹಾಕಿಸುವ ಕಾರ್ಯಕ್ರಮವು ತೆಗೆದುಕೊಳ್ಳಲಾಗಿ ಈ ಎಲ್ಲಾ ಗ್ರಾಮಗಳಲ್ಲಿಯೂ ೩೯ ಕೊಳವೆ ಬಾವಿಗಳನ್ನು ತೋಡಲಾಗಿದ್ದು ಅವುಗಳಲ್ಲಿ ೩೯ ಕೊಳವೆ ಬಾವಿಗಳು ಸಫಲವಾಗಿವೆ ಎಂಬುದಾಗಿ ಕನ್ನಡದಲ್ಲಿ ತಿಳಿಸಿದ್ದೀರಿ. ಅದೇ

ಇಂಗ್ಲೀಷ್‌ನಲ್ಲಿ ೩೯ ಹಳ್ಳಿಗಳಲ್ಲಿ ತೋಡಲಾದ ಬಾವಿಗಳಲ್ಲಿ ೩೬ ಬಾವಿಗಳು ಯಶಸ್ವಿಯಾಗಿವೆ ಎಂಬುದಾ ತಿಳಿಸಿದ್ದೀರಿ. ಇದರಲ್ಲಿ ಯಾವುದು ತಪ್ಪು ಎಂಬುದಾಗಿ ದಯಮಾಡಿ ತಿಳಿಸಿ.

ಶ್ರೀ ಕೆ. ಪ್ರಭಾಕರ್.—ಇಂಗ್ಲೀಷಿನಲ್ಲಿ ಕೊಟ್ಟಿರತಕ್ಕಂತಹ ಅಂಕಿ ಅಂಶ ನಿಜ ಎಂಬುದಾಗಿ ತಿಳಿಸುತ್ತಿದ್ದೇನೆ. ಜನಸಂಖ್ಯೆಯ ಆಧಾರದ ಮೇಲೆ ಕೊಳವೆ ಬಾವಿಗಳನ್ನು ತೆಗೆಯುತ್ತಿಲ್ಲ. ಒಂದು ಊರಿಗೆ ಒಂದು ಬಾವಿ ಇರಬೇಕೆಂಬ ಆಧಾರದ ಮೇಲೆ ಬಾವಿಗಳನ್ನು ತೋಡಿಸುತ್ತಿದ್ದೇವೆ. ಜನಸಂಖ್ಯೆ ಇನ್ನೂ ಹೆಚ್ಚಿಗೆ ಇದ್ದು ಇನ್ನೊಂದು ಬಾವಿ ಬೇಕೆಂದರೆ ಎರಡನೇ ಸುತ್ತಿನಲ್ಲಿ ತೆಗೆಸುವ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ ಸಿದ್ದಮಾದಯ್ಯ.—ನಮ್ಮ ತಾಲ್ಲೂಕು ಹಳ್ಳಿಗಳೇ ಜಾಸ್ತಿ ಇರತಕ್ಕಂತಹ ತಾಲ್ಲೂಕು. ನಮ್ಮ ಕಡೆ ಕೆಲವು ದೊಡ್ಡಿಗಳು ಎಂಬುದಾಗಿ ಇವೆ ಆ ರೀತಿಯ ದೊಡ್ಡಿಗಳಲ್ಲಿ ಸುಮಾರು ೨೦ ಒಕ್ಕಲು ೩೦ ಒಕ್ಕಲು, ೪೦ ಒಕ್ಕಲುಗಳು ಇರತಕ್ಕಂತಹ ಹಳ್ಳಿಗಳು ಇವೆ. ಆ ಹಳ್ಳಿಗಳಲ್ಲಿರತಕ್ಕಂತಹವರಲ್ಲಿ ಬಹುಪಾಲು ಗಿರಿಜನರೇ ಜಾಸ್ತಿ ಇದ್ದಾರೆ. ಅವರಿಗೆ ಕುಡಿಯುವ ನೀರನ್ನು ಒದಗಿಸಿಕೊಡುವುದಕ್ಕೆ ಆಗದಿದ್ದ ಮೇಲೆ ಸರ್ಕಾರ ಏನು ಕೆಲಸ ಮಾಡುತ್ತದೆ ಎಂಬುದಾಗಿ ಜನಸಾಮಾನ್ಯರು ಅರ್ಥ ಮಾಡಿಕೊಳ್ಳುವ ಸನ್ನಿವೇಶ ಇದೆ. ಆದ್ದರಿಂದ ಅಂತಹ ಹಳ್ಳಿಗಳಿಗೂ ಕುಡಿಯುವ ನೀರನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡುತ್ತೀರಾ ? ಹಣ ಮಾತ್ರ ಜಾಸ್ತಿ ಖರ್ಚಾಗಿದೆ ಆ ಹಳ್ಳಿಯ ಜನರು ಕುಡಿಯುವ ನೀರನ್ನು ತೆಗೆದುಕೊಂಡು ಬರಬೇಕಾದರೆ, ಹಳ್ಳಿ–ಕೊಳ್ಳಿಗಳಲ್ಲಿ ಸುಮಾರು ಒಂದು ಮೈಲಿ ದೂರದಿಂದ ಕುಡಿಯುವ ನೀರನ್ನು ಹೊತ್ತುಕೊಂಡು ಬರತಕ್ಕಂತಹ ಪ್ರಸಂಗ ಇದೆ.

೯ – ೩೦ ಎ. ಎಂ.

ಶ್ರೀ ಕೆ. ಪ್ರಭಾಕರ್.— ಚಿಕ್ಕ ಚಿಕ್ಕ ಗ್ರಾಮಗಳು ಅಂತಾಗಲಿ ಅಥವಾ ಚಿಕ್ಕ ಚಿಕ್ಕ ಹಳ್ಳಿಗಳು ಅಂತಾಗಲಿ ಯಾವ ತಾರತಮ್ಯವೂ ನಮಗೆ ಇಲ್ಲಾ ಯಾವ ಕೆಲಸವನ್ನೇ ಮಾಡಲಿ ಒಂದಕ್ಕೊಂದು ವ್ಯತ್ಯಾಸಮಾಡಿ ಕೆಲವು ಹಳ್ಳಿಗಳನ್ನು ಸೇರಿಸುವುದು ಕೆಲವು ಹಳ್ಳಿಗಳನ್ನು ಬಿಟ್ಟು ಬಿಡುವುದು ಆ ರೀತಿ ಮಾಡುವುದು ಇಲ್ಲಾ ಆದರೆ ಇದರಲ್ಲಿ ಏನಾಗುತ್ತದೆ ಎಂದರೆ ಹೌಸಿಂಗ್ ಕಾಲೋನಿ ಬಗ್ಗೆ ಸರ್ವೇ ಮಾಡುವಾಗ ಆ ಭೂಮಿಯನ್ನು ಸರ್ವೆ ಮಾಡಿರುವುದಿಲ್ಲಾ. ಹೊಸ ವರ್ಷ ಹುಟ್ಟಿದಾಗ ಅಂಥಾ ಭೂಮಿಯನ್ನು ಸೇರಿಸುತ್ತೇನೆ. ಈ ಬಗ್ಗೆ ಯಾವುದಾದರೂ ಬಿಟ್ಟಿದ್ದರೆ ಅದು ತಮ್ಮ ಗಮನಕ್ಕೆ ಬಂದಿದ್ದರೆ ಅದನ್ನು ಸರ್ಕಾರದ ಗಮನಕ್ಕೆ ತಂದರೆ ದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಇದು ಚಿಕ್ಕ ಹಳ್ಳಿ ಅನ್ನುವುದಾಗಲಿ ಅಥವಾ ಒಡವರು ಇದ್ದಾರೆ ಅನ್ನುವುದಾಗಲಿ ಆ ಬಗ್ಗೆ ಯಾವ ತಾರತಮ್ಯವೂ ಇಲ್ಲಾ. ಒಟ್ಟಿನಲ್ಲಿ ಹೇಳುವುದಾದರೆ ಎಲ್ಲರಿಗೂ ಕೂಡ ನೀರನ್ನು ಒದಗಿಸಿಕೊಡಬೇಕೆನ್ನುವುದೇ ನಮ್ಮ ನಿಯಮವಾಗಿದೆ ಅದರಂತೆ ಏರ್ಪಾಡು ಮಾಡುತ್ತೇವೆ.

angalore City Corporation Market Complex at Jayanagar Bangalore

767. Sri T. R. Shamanna (Basavanagudi).—Will the Minister for Municipal Administration be pleased to state.—

(a) what was the orginal estimate for the construction of the B. C. Corporation Market Complex at Jayanagar, Bangalore-11 ;

(b) what is the final cost for completing the works of the above market complex.

(c) what is the demand collection and balance of the revenue of the above market for 1977-78 and what is the total outstanding as on 31st December 1978.

(d) what is the balance due for the Lease of the Cinema portion in the complex,